ವೀಣಾ ರವಿ ಪೈ, ಕಾಸರಕೋಡ
ಭಾರತವನ್ನು ಪುಣ್ಯಭೂಮಿ ಎಂದು ಏಕೆ ಕರೆಯುತ್ತಾರೆ?



'ಪುಣ್ಯ'ಕೋಟಿಯಂತೆ ಸ್ವಸಂತೋಷದಿಂದ ಹುಲಿಯ ಬಾಯಿಗೆ ಬೀಳುವವರು ಜಾಸ್ತಿ ಇರುವುದರಿಂದ.

ಕೊಟ್ಟೂರು ಜವಳಿ ಜಯಣ್ಣ, ದಾವಣಗೆರೆ
ನಾರಿ ಮುನಿದರೆ ಮಾರಿ. ಪ್ರಕೃತಿ ಮುನಿದರೆ?
ಇನ್‌ಸ್ಟೆಂಟ್ ಗೋರಿ.

ಜೆ. ಪ್ರದೀಪಕುಮಾರ್, ಹೂವಿನಹಡಗಲಿ
ನಕಾರಾತ್ಮಕ ಯೋಚನೆಗಳನ್ನು ಸಕಾರಾತ್ಮಕವಾಗಿ ಬದಲಾಯಿಸಿಕೊಳ್ಳುವುದು ಹೇಗೆ?
ನಕಾರಾತ್ಮಕ ಯೋಚನೆಗಳನ್ನು ನಕಾರಾತ್ಮಕವಾಗಿ ನೋಡಿಬಿಟ್ಟರಾಯ್ತು!

ಎಸ್. ಕೃಷ್ಣಮೂರ್ತಿ, ಬೆಂಗಳೂರು
ಬೆಳ್ಳಗಿರುವುದೆಲ್ಲ ಹಾಲಲ್ಲ ಎಂದು ಬೆಕ್ಕಿಗೆ ಹೇಗೆ ತಿಳಿಯುತ್ತದೆ?




'ಮಾರ್‌ಜಾಲತಾಣ'ದಲ್ಲಿ ಗೂಗಲ್ ಮಾಡಿ ಹುಡುಕಿ ಮಾಹಿತಿ ಪಡೆದಿರುತ್ತದಂತೆ.

ಎಸ್. ಕುಮಾರಸ್ವಾಮಿ, ಚಿಕ್ಕಬಳ್ಳಾಪುರ
ಪತ್ರಿಕೆಗಳನ್ನು ಕೊಂಡು ಓದುವುದಕ್ಕೂ, ಕದ್ದು/ಎರವಲು ಪಡೆದು ಓದುವುದಕ್ಕೂ ವ್ಯತ್ಯಾಸವೇನು?
ಕೊಂಡು ಓದುವವರು ಅನ್ಯಭಾಷಿಗರು, ಕದ್ದು/ಎರವಲು ಪಡೆದು ಓದುವವರು ಕನ್ನಡಿಗರು.

ಕುಮಾರ ಚಲವಾದಿ, ಹಾಸನ
ಹಿಂದೆ ವಿದ್ಯಾರ್ಥಿಗಳು ತಪ್ಪು ಮಾಡಿದಾಗ ಶಿಕ್ಷೆ ನೀಡುತ್ತಿದ್ದರು. ಈಗೇಕೆ ಬೇಡ?
ಆಗ ಪಾಲಕರು 'ಹಾಕ್ರೀ ಇನ್ನೆರಡು, ಬುದ್ಧಿ ಬರಲಿ' ಎನ್ನುತ್ತಿದ್ದರು; ಈಗ 'ಹಾಕ್ತೀನ್ನೋಡಿ ಎರಡು' ಎನ್ನುವರಲ್ಲ.

ಮನೋರಮಾ ಪ್ರಭು, ಕಾಸರಕೋಡ
ಗ್ರಹಣದಂದು ಜ್ಯೋತಿಷಿಗಳು ವಾಹಿನಿಗಳಲ್ಲಿ ಬೇಡವಾದ್ದನ್ನೇ ಹೇಳಿ ಜನರಲ್ಲಿ ಭಯ ಹುಟ್ಟಿಸುವುದೇಕೆ?
ವೃತ್ತಿಗುಣ! ಗ್ರಹಣದ ದಿನ ಜನರನ್ನು ಅತಿ ಕ್ರೂರವಾಗಿ ಹಿಡಿಯುವ ಗ್ರಹವೆಂದರೆ ಜ್ಯೋತಿಷಿಯೇ.

ಎಂ.ಜಿ. ನೇಹವರ್ಷಿಣಿ, ಬಳ್ಳಾರಿ
'ಲಗಾಮು ಇಲ್ಲದ ನಾಲಿಗೆ'; ಈ ಉಕ್ತಿಯ ನಿಜವಾದ ಅರ್ಥ?
ಲ ಲಜ್ಜೆ; ಗಾ ಗಾಂಭೀರ್ಯ; ಮು ಮುತುವರ್ಜಿ; ಇಲ್ಲದಂತಹ ಮಾತನಾಡುವಂತಹದು.

ಬಿ. ಚಂದ್ರೇಗೌಡ, ಬೆಂಗಳೂರು
ರಾಜಕಾರಣಕ್ಕೂ, ಸಂಸಾರಕ್ಕೂ ಏನು ವ್ಯತ್ಯಾಸ?
ಸಂಸಾರ ಮಮತಾ ಮಯ; ರಾಜಕಾರಣ 'ಮಮ' (ನನ್ನದು), ಮಯಾ (ನನ್ನಿಂದ)....

ಮಾಧವ ಶ್ಯಾನುಭಾಗ, ಕುಂದಾಪುರ
ದ್ರೋಣರು 'ಶಾಪಾದಪಿ...' ಯುದ್ಧ ಗೆದ್ದುಕೊಡುವೆನೆಂದು ಕೌರವನಿಗೆ ವಚನವಿತ್ತು ಶಿಷ್ಯರಲ್ಲಿ ಅಸಮಾನತೆ ತೋರಿದ್ದು ಅನೀತಿಯಲ್ಲವೆ?
ನಿಜ. ಪಕ್ಷದ ಹೈಕಮಾಂಡ್‌ನ ಮಗ ಅಯೋಗ್ಯನಾದರೂ ಓಲೈಕೆ ಅನಿವಾರ್ಯವೆನಲು ಅದೇ ಮೊದಲ ಉದಾಹರಣೆ.

ರಮೇಶ್, ಹನುಮನಾಳು
ಎಲ್ಲ ತರಹದ ಔಷಧೀಯ ತರಕಾರಿ, ಸೊಪ್ಪುಗಳನ್ನು ತಿಂದರೂ ರೋಗಗಳು ಬರುವುದೇಕೆ ರಾಮ್?
ಬೇಯಿಸಿದಾಗ ಅವುಗಳಲ್ಲಿನ ಪೌಷ್ಟಿಕಾಂಶ ಸತ್ತರೂ ಪೆಸ್ಟಿಸೈಡ್ ಸಾಯುವುದಿಲ್ಲವಾದ್ದರಿಂದ.

ಎನ್.ವಿ. ಶ್ರೀನಿವಾಸ್, ಮೈಸೂರು
ನವೆಂಬರ್ ತಿಂಗಳು ಕನ್ನಡ ಮಾಸ, ಕನ್ನಡಿಗರ ಮುಖದಲ್ಲಿ ಮಂದಹಾಸ. ಆನಂತರ?
ಕನ್ನಡದ 'ನವೆ' ಕಳೆದು ಸ್ವಸ್ಥಿತಿಗೆ ಶ್ವಾಸ, ಮಾಯ ಕನ್ನಡದ ವಿಶ್ವಾಸ.

## ಬಹುಮಾನಿತ ಪ್ರಶ್ನೆ

ಬೋರೇಗೌಡ ಬಿ. ಸರಸ್ವತಿಪುರ
ಬಡತನ ಮನುಷ್ಯನಿಗೆ ಯಾವುದನ್ನು ಕಲಿಸುತ್ತದೆ ಗುರುದೇವಾ?
ತಾಳ್ಮೆಯಿಂದ ಕ್ಯೂ ನಿಲ್ಲುವುದನ್ನು.

ಕೆ.ವಿ. ಶಿವಕುಮಾರ್ ಕಾಳೀಹುಂಡಿ, ಮೈಸೂರು
ಮುಸುಕಿದಾ ಮಬ್ಬಿನಲಿ ಅವಳ ಚಿತ್ತಾರ ಮನದಲ್ಲಿ ಮೂಡಿದೆ. ಏನು ಮಾಡಲಿ?
ಹೈ ಡೆಫೆನಿಷನ್ ಕ್ವಾಲಿಟಿಯಲ್ಲಿ ಫೋರ್‌ಗ್ರೌಂಡ್‌ಗೆ ತನ್ನಿ. ಇಲ್ಲದಿದ್ದರೆ ಡಿಲೀಟ್ ಆಗಿಬಿಟ್ಟಾಳು.

ಜೆ.ಆರ್.ಆದಿನಾರಾಯಣಮುನಿ, ಬೆಂಗಳೂರು
ಈಗ ಧರ್ಮದ ದಾರಿ ಯಾವುದು?
ಟಿಪ್ಪೂ ಡ್ರಾಪ್!

ಸುಜ್ಞಾನಾಚಾರ್ಯ, ಕಲಿಕೆರೆ
ಗೂಬೆ ಲಕ್ಷ್ಮೀದೇವಿಗೆ ವಾಹನ. ಕತ್ತೆ...?



ಕತ್ತೆ ವಾಹನವಲ್ಲ, ವ್ಯಕ್ತಿ. ಲಕ್ಷ್ಮಿಯನ್ನು ಹೊಂದಲು ಗೂಬೆಯಂತೆ ಆಡುವವನೇ ಕತ್ತೆ.

ಪಿ.ಜೆ. ರಾಘವೇಂದ್ರ, ಮೈಸೂರು
ಮಾತು ಬೆಳ್ಳಿ. ಮೌನ ಬಂಗಾರ. ಮಾನ?
ಸಣ್ಣ ಕಲ್ಲು ಬಿದ್ದರೂ ಫಳ್ ಎನ್ನುವ ತೆಳುವಾದ ಗಾಜು.

ರಮೇಶ ಜ. ಬೊಂಗಾಳೆ, ಬೈಲಹೊಂಗಲ
ಈ ವಿಶ್ವದಲ್ಲಿ ಅಮರವಾದದ್ದು ಯಾವುದು ರಾಮ್?
ನಗರದ ಪ್ರಮುಖ ಬೀದಿಗಳು ಇರುವ ಮರವೆಲ್ಲ ಕತ್ತರಿಸಿ ಅಮರ ಮಾಡುವರಲ್ಲ!

■ ರಾಮ್